ಸಿಸಿ ನಂಃ 5587/2021
ಸಿ.ಡ್ಬ್ಲೂ 1/ಪಿ.ಡಬ್ಲ್ಯೂ 1

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 5587/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪರಮೇಶ್ವರ ಅವರಸಾ |
| ತಂದೆಯ ಹೆಸರು | ಃ | ಶಂಕರ ನಾರಾಯಣ |
| ವಯಸ್ಸು | ಃ | 61 ವರ್ಷ |
| ಉದ್ಯೋಗ | ಃ | ನಿವೃತ್ತ ನೌಕರ |
| ವಾಸ ಸ್ಥಳ | ಃ | ಉದ್ಯಮನಗರ , ತಾಃ ಯಲ್ಲಾಪುರ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 27-01-2023

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು ಈ ಹಿಂದೆ ಪಿ.ಸಿ.ಎ ಆ್ಯಂಡ್ ಆರ್ ಡಿ ಬ್ಯಾಂಕನಲ್ಲಿ ಲೆಕ್ಕಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ . ನಾನು ದಿನಾಲೂ ಯಲ್ಲಾಪುರದಿಂದ ಹೋಗಿ ಬಂದು ಮಾಡುತ್ತಿದ್ದೆ . 2021 ರಲ್ಲಿ ಕರೋನಾ ಇದ್ದ ಕಾರಣ ಬಸ್ ವ್ಯವಸ್ತೆ ಇರಲಿಲ್ಲ . ದಿಃ 10-6-2021 ರಂದು ನಾನು ನನ್ನ ಮನೆಯ ಖರ್ಚಿಗಾಗಿ ರೂ.42,000/- ಗಳನ್ನು ನನ್ನ ಪ್ಯಾಂಟ ಜೇಬಿನಲ್ಲಿ ಇಟ್ಟುಕೊಂಡು ನನ್ನ ಊರಾದ ಯಲ್ಲಾಪುರಗೆ ಹೋಗಲು ನಾನು ಟೋಲನಾಕಾ ಹತ್ತಿರ ಹೋಗುತ್ತಿದ್ದೆ . ನಾನು ಕಲಘಟಗಿಗೆ ಹೋಗುವ ರಸ್ತೆಯಲ್ಲಿರುವ ವಿಜಯಾ ಬ್ಯಾಂಕ ಮುಂದೆ ಬಸ್ಸಗಾಗಿ ಕಾಯುತ್ತಾ ನಿಂತಿದ್ದೆ . ಆಗ ನ್ಯಾಯಾಲಯದ ಮುಂದೆ ಇರುವ ಆರೋಪಿ ಕಪ್ಪು ಬಣ್ಣದ ಸ್ಪ್ಲೆಂಡರ್ ಮೋಟರ್ ಸೈಕಲ್ ಮೇಲೆ ಟೋಲ ನಾಕಾ ಕಡೆಯಿಂದ ಬಂದು , ನನಗೆ ಅಜ್ಜರ ಎಲ್ಲಿಗೆ ಹೋಗಬೇಕು ಎಂದು ಕೇಳಿದ್ದ , ಅದಕ್ಕೆ ನಾನು ಯಲ್ಲಾಪುರಕ್ಕೆ ಹೋಗಲು ಬಸ್ಸಿಗಾಗಿ ಕಾಯುತ್ತಿದ್ದೇನೆ ಎಂದು ಹೇಳಿದ್ದೆ . ಆತ ನಾನು ಎರಿಕೊಪ್ಪಕ್ಕೆ ಹೋಗುತ್ತಿದೇನೆ ಅಲ್ಲಿ ಯಲ್ಲಾಪೂರಕ್ಕೆ ಹೋಗಲು ಸಾಕಷ್ಟು ಬಸ್ ಸಿಗುತ್ತವೆ ನಾನು ನಿಮಗೆ ಅಲ್ಲಿಗೆ ಬಿಡುತ್ತೇನೆ ಬನ್ನಿ ಎಂದು ಕೇಳಿದ್ದ . ಆದ್ದರಿಂದ ನಾನು ಆತನ ಮೋಟರ್ ಸೈಕಲ್ ಮೇಲೆ ಹತ್ತು ಕುಳಿತು ಎರಿಕೊಪ್ಪದವರೆಗೆ ಹೋಗಿದ್ದೆ . ಆತ ಎರಿಕೊಪ್ಪ ಬಿಜ್ಜ ಹತ್ತಿರ ತನ್ನ ಮೋಟರ್ ಸೈಕಲ್ ನಿಲ್ಲಿಸಿ ನನಗೆ ನಿನ್ನ ಹತ್ತಿರ ಎಷ್ಟು ಹಣ ಇದೆ ತೆಗಿ ಎಂದು ಧಮಕಿ ಹಾಕಲು ಪ್ರಾರಂಭಿಸಿದ . ಆಗ ನಾನು ಯಾಕೆ ತೆಗೆಯಬೇಕು ಎಂದು ಕೇಳಿದ್ದೆ . ಆಗ ಆತ ನನಗೆ ಹೊಡೆಯಲು ಬಂದಿದ್ದ . ಆಗ ನಾನು ಆತನಿಂದ ತಪ್ಪಿಸಿಕೊಳ್ಳಲು ಸ್ವಲ್ಪ ಓಡಿ ಹೋಗಿದ್ದೆ . ಆತ ನನಗೆ ಅಡ್ಡಗಟ್ಟಿ ನನ್ನ ಮುಖಕ್ಕೆ ಮುಷ್ಟಿ

ಮಾಡಿ ಗುದ್ದಿದ್ದ . ಆತ ತನ್ನ ಮೋಟರ್ ಸೈಕಲ್ ನಿಂದ ನನಗೆ ಅಡ್ಡಗಟ್ಟಿದ್ದ . ಆತ ನನಗೆ ಹೊಡೆದು ನನ್ನ ಶರ್ಟ ಜೇಬಿನಲ್ಲಿ ರೂ.5,000/- ಹಣ ಕಿತ್ತುಕೊಂಡು ಧಾರವಾಡದ ಕಡೆಗೆ ಹೋಗಿದ್ದ . ಸದರಿ ಹಣ 500 ರೂಪಾಯಿ ನೋಟಿನ ಹತ್ತು ನೋಟುಗಳು ಇದ್ದವು . ಆಗ ಅಂದಾಜು ಮಃ 3.30 ರಿಂದ 3.45 ಗಂಟೆ ಆಗಿತ್ತು . ಆತನಿಗೆ ಅಂದಾಜು 30 -35 ವರ್ಷ ವಯಸ್ಸಾಗಿತ್ತು . ಆತ ಅಂದಾಜು 5 ಪೂಟ ಎತ್ತರ ಕಟ್ಟು ಮಸ್ತಾಗಿದ್ದ . ಆತ ಹಸಿರು- ನೀಲಿ , ಬಣ್ಣದ ಟೀ ಶರ್ಟ ಮತ್ತು ಜಿನ್ಸ ಪ್ಯಾಂಟ್ ಧರಿಸಿದ್ದ . ಆತ ಗೋಧಿ ಬಣ್ಣದವನಾಗಿದ್ದ . ಆತ ಹೆಲ್ಮೇಟ ಸಹ ಧರಿಸಿದ್ದ . ಆತ ಮತ್ತೇನು ಧರಿಸಿದ್ದ ಎಂದು ನನಗೆ ಈಗ ನೆನಪಾಗುತ್ತಿಲ್ಲ . ಆತ ಓಡಿ ಹೋದ ನಂತರ ನಾನು ಪೋಲಿಸರಿಗೆ ಮತ್ತು ನನ್ನ ಮನೆಯವರಿಗೆ ಪೋನ್ ಮಾಡಿ ವಿಷಯ ತಿಳಿಸಿದ್ದೆ . ಆತ ಹೊಡೆದಿದ್ದರಿಂದ ನನಗೆ ಒಳಪೆಟ್ಟಾಗಿದ್ದರಿಂದ ಮನೆಯಲ್ಲಿಯೇ ಔಷಧಿ ಪಡೆದಿದ್ದೆ . ಸದರಿ ಘಟನೆಯಾದ 3-4 ಗಂಟೆಗಳ ನಂತರ ನಾನು ಪೋಲಿಸರಿಗೆ ದೂರು ನೀಡಿದ್ದೆ . ನಾನು ನೀಡಿರುವ ದೂರನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-1 ಎಂದು , ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-1 (ಎ) ಎಂದು ಗುರುತಿಸಲಾಯಿತು .

ಪೋಲಿಸರಿಗೆ ನಂತರ ಗುನ್ಹಾ ಸ್ಥಳವನ್ನು ನಾನೇ ತೋರಿಸಿದ್ದೆ . ಪೋಲಿಸರು ವಿಜಯಾ ಬ್ಯಾಂಕ ಹತ್ತಿರ ಮತ್ತು ಎರಿಕೊಪ್ಪದ ಹತ್ತಿರ ಪಂಚನಾಮೆ ಮಾಡಿ ಪೋಟೋ ತೆಗೆದಿದ್ದರು . ಸದರಿ ಪಂಚನಾಮೆಯನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-2 ಎಂದು , ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-2 (ಎ) ಎಂದು ಗುರುತಿಸಲಾಯಿತು . ಪೋಲಿಸರು ಗುನ್ಹಾ ಸ್ಥಳದ ಜಾಗೆಯನ್ನು ಸಹ ಗುರುತಿಸಿದ್ದರು . ವಿಜಯಾ ಬ್ಯಾಂಕ ಹತ್ತಿರ ತೆಗೆದ ಎರಡು ಪೋಟೋಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ನಿಶಾನೆ-ಪಿ-3 ಮತ್ತು 4 ಎಂದು , ಎರಿಕೊಪಪ್ಪಿ ಬ್ರಿಜ್ಡ ಹತ್ತಿರ ತೆಗೆದಿರುವ ಎರಡು ಪೋಟೋಗಳನ್ನು ನಿಶಾನೆ-ಪಿ-5 ಮತ್ತು 6 ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ 10-12 ದಿನಗಳ ನಂತರ ಪೋಲಿಸರು ನನಗೆ ಕಳ್ಳ ಸಿಕ್ಕಿದ್ದಾನೆ ಎಂದು ಹೇಳಿದ್ದರು . ಪೋಲಿಸರು ನನಗೆ ವಿದ್ಯಾಗಿರಿ ಪೋಲಿಸ್ ಠಾಣೆಗೆ ಕರೆಸಿದ್ದರು . ನಾನು ಪೋಲಿಸ್ ಠಾಣೆಗೆ ಹಾಜರಾಗಿ ನನ್ನ ಹಣ ಮತ್ತು ನನ್ನ ಹಣ ದೋಚಿದ ವ್ಯಕ್ತಿಯನ್ನು ಗುರುತಿಸಿರುತ್ತೇನೆ . ಸಾಕ್ಷಿ ಸ್ವತಃ ಮುಂದುವರೆದು ನಾನು ಆತನ ಧ್ವನಿಯನ್ನು ಸಹ ಗುರುತಿಸಿದ್ದೆ

ಎಂದು ಉತ್ತರಿಸಿರುತ್ತಾರೆ . ನಾನು ಅದೇ ಸಮಯಕ್ಕೆ ಸದರಿ ವ್ಯಕ್ತಿಯ ಮೋಟರ್ ಸೈಕಲ್ ಸಹ ಗುರುತಿಸಿರುತ್ತೇನೆ . ಆಗ ಪೋಲಿಸರು ಒಂದು ಫೋಟೋ ತೆಗೆದಿದ್ದರು ಅದನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-7 ಎಂದು ಗುರುತಿಸಲಾಯಿತು . ಸಾಕ್ಷಿ ನಾನು ಸಹ ಸದರಿ ಪೋಟೋದಲ್ಲಿ ಇದ್ದೇನೆ ಎಂದು ಉತ್ತರಿಸಿರುತ್ತಾರೆ . ಆ ದಿನ ನನ್ನ ಹಣ ದೋಚಿದ ವ್ಯಕ್ತಿ ನನ್ನ ಕೀಸೆಯಲ್ಲಿದ್ದ ಪ್ಯಾನ ಕಾರ್ಡನ ಝೇರಾಕ್ಸ ಪ್ರತಿಯನ್ನು ಸಹ ಪಡೆದುಕೊಂಡು ಹೋಗಿದ್ದ . ಪೋಲಿಸರು ಸದರಿ ವ್ಯಕ್ತಿಯಲ್ಲಿ ರೂ. 3,500/- ಹಣ ಸಿಕ್ಕಿದೆ ಎಂದು ಹೇಳಿದ್ದರು . ಸದರಿ ಹಣ 500 ಮುಖ ಬೆಲೆಯ ನೋಟುಗಳಾಗಿದ್ದವು . ನಾನು ಅವುಗಳನ್ನು ಗುರುತಿಸಿರುತ್ತೇನೆ . ಸದರಿ ಹಣವನ್ನು ನಾನು ನ್ಯಾಯಾಲಯದ ಆದೇಶದಂತೆ ಬಿಡಿಸಿಕೊಂಡಿರುತ್ತೇನೆ . ಪೋಲಿಸರು ನನ್ನ ಝೇರಾಕ್ಸ ಪ್ಯಾನ ಕಾರ್ಡ ಪ್ರತಿ ಸಹ ಸಿಕ್ಕಿದೆ ಎಂದು ಹೇಳಿದ್ದರು . ನಾನು ಬಿಡಿಸಿಕೊಂಡ ಹಣದ ಪೋಟೊವನ್ನು ಪೋಲಿಸರು ತೆಗೆದಿದ್ದಾರೆ . ಅವುಗಳನ್ನು ನೋಡಿದರೆ ಗುರುತಿಸುತ್ತೇನೆ . ನನ್ನಿಂದ ಹಣ ಕಿತ್ತುಕೊಂಡ ಹೋದ ವ್ಯಕ್ತಿಯನ್ನು ಸಹ ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಆತನೆ ನನ್ನಿಂದ ಹಣ ಕಿತ್ತುಕೊಂಡು ಹೋದ ವ್ಯಕ್ತಿ ಎಂದು ಗುರುತಿಸಿರುತ್ತಾರೆ .

**ಮುದ್ದೆ ಮಾಲುಗಳನ್ನು ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೇಳಿರುವುದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.